ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.213/2024

| | | |
|---|---|---|
| ಸಾಕ್ಷಿಯ ಹೆಸರು | : ಸತೀಶ್ ಕೆ.ಎಸ್. | ಸಿ.ಡಬ್ಲ್ಯು 2 |
| ತಂದೆಯ ಹೆಸರು | : ಸಿದ್ದಪ್ಪ ಶೆಟ್ಟಿ | ಪಿ.ಡಬ್ಲ್ಯು 1 |
| ವಯಸ್ಸು | : 42 ವರ್ಷ | |
| ಉದ್ಯೋಗ | : ಅಬಕಾರಿ ಉಪನಿರೀಕ್ಷಕರು | |
| ವಾಸ ಸ್ಥಳ | : ಚಿಕ್ಕಮಗಳೂರು | |

ದಿನಾಂಕ:05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ದಿನಾಂಕ 18.08.2017 ರಿಂದ ದಿನಾಂಕ 06.02.2024 ರವರೆಗೆ ಚಿಕ್ಕಮಗಳೂರು ಉಪ ವಿಭಾಗ ಕಛೇರಿಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 15.04.2023 ರಂದು ಚಾಸ-1 ಇವರೊಂದಿಗೆ ನಾನು ಮತ್ತು ಚಾಸ-3 ಎಲ್ಲರೂ ಸೇರಿ ತರೀಕೆರೆ ತಾಲ್ಲೂಕಿನ ಕಸಬಾ ಹೋಬಳಿಯ ಎಂ.ರಂಗಾಪುರದಿಂದ ಇಟ್ಟಿಗೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ನಾವು ಚುನಾವಣಾ ನೀತಿ ಸಂಹಿತೆ ಕಾರಣ ಗಸ್ತು ಕರ್ತವ್ಯಕ್ಕೆ ಹೋಗಿದ್ದೆವು. ನಾವು ಗಸ್ತು ಕರ್ತವ್ಯದಲ್ಲಿದ್ದಾಗ ಚಾಸ-1 ರವರಿಗೆ ಮೇಲೆ ಹೇಳಿದ ಸ್ಥಳದ ಮೂಲಕ ಅಕ್ರಮವಾಗಿ ಮದ್ಯ ಸಾಗಾಟ ಆಗುತ್ತಿದೆ ಎಂಬ ಮಾಹಿತಿ ಬಂದಿತು, ಕಾರಣ ನಾವು ಸ್ಥಳಕ್ಕೆ ಹೋಗಿ ರಸ್ತೆ ಕಾವಲು ಮಾಡುತ್ತಾ ನಿಂತಿದ್ದೆವು. ಆ ಸಮಯಕ್ಕೆ ಒಬ್ಬ ವ್ಯಕ್ತಿಯು ಒಂದು ವಾಹನದ ಮೇಲೆ ಚೀಲದಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಬರುತ್ತಿರುವುದನ್ನು ಕಂಡು ಅನುಮಾನದಿಂದ ವಾಹನವನ್ನು ತಡೆದು ನಿಲ್ಲಿಸಲು ಪ್ರಯತ್ನ ಮಾಡಿದೆವು. ಆದರೆ ವ್ಯಕ್ತಿಯು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದನು. ವಾಹನವನ್ನು ಪರಿಶೀಲಿಸಿದಾಗ ಅದಕ್ಕೆ ನೋಂದಣಿ ನಂಬರ್ ಇರಲಿಲ್ಲ. ಚೀಲದಲ್ಲಿ 90 ಮಿ.ಲೀ.ಯ ಸೂಪರ್ ಪವರ್ ಪ್ರೀಮಿಯಂ ವಿಸ್ಕಿ ಹೆಸರಿನ 144 ಪೌಚುಗಳು ಇದ್ದವು. ಚಾಸ-1 ರವರ ಸದರಿ ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂದು ತಿಳಿದ ಕಾರಣ ಅದನ್ನು ನನ್ನ ಮತ್ತು ಚಾಸ-3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ತಮ್ಮ ವಶಕ್ಕೆ ಪಡೆದುಕೊಂಡರು. ನಾನು ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಹಾಕಿದ್ದೇನೆ. ಓಡಿ ಹೋದ ವ್ಯಕ್ತಿ ನ್ಯಾಯಲಯದ ಮುಂದೆ ಇರುವ ವ್ಯಕ್ತಿ ಇರುವುದಿಲ್ಲ. ಈ ಬಗ್ಗೆ ನಾನು ಅಧಿಕಾರಿಗಳಿಗೆ ಹೇಳಿಕೆ ಕೊಟ್ಟಿದ್ದೇನೆ. ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು,

ಭಾವಚಿತ್ರಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಯು ಖಾಲಿ ಪೌಚುಗಳನ್ನು ನೋಡಿ ಗುರುತಿಸಿದ್ದು ಚೀಲದ ಸಮೇತ ಅವುಗಳನ್ನು ಮು.ಮಾ -1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಮೇಲೆ ಏಕೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸಾಕ್ಷಿಯು ಅವರು ವಾಹನದ ಮಾಲೀಕರು ಇರುತ್ತಾರೆ ಎಂದು ಹೇಳುತ್ತಾರೆ. ಅವರು ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಮು.ಮಾಲಿಗೂ ಮತ್ತು ಆರೋಪಿಗೂ ಈ ಪ್ರಕರಣಕ್ಕೂಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿ. ಅವರು ವಾಹನದ ಮಾಲೀಕರು ಎಂಬ ಕಾರಣಕ್ಕೆ ಮಾತ್ರ ಅವರ ಮೇಲೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕಛೇರಿಯ ಅಂಖ್ಯೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.